SRI DEVARAJ URS ACADEMY OF HIGHER EDUCATION & RESEARCH
SRI DEVARAJ URS MEDICAL COLLEGE
Tamaka, Kolar
UNIVERSITY LIBRARY & LEARNING RESOURCE CENTRE
Online Newspaper Clipping Service
ವಿಜಯ ಕರ್ನಾಟಕ
Dtd-Tuesday, 12th, December- 2017
Pg.No.08

# ಮೇ 10ಕ್ಕೆ ನೀಟ್ ಪರೀಕ್ಷೆ?

**ಹೊಸದಿಲ್ಲಿ:** ವೈದ್ಯಕೀಯ, ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ 2018ರ ಸಾಲಿನ 'ನೀಟ್' ಪರೀಕ್ಷೆ ಮೇ 10ರಂದು ನಡೆಯುವ ಸಾಧ್ಯತೆ ಇದೆ. ಈ ಸಂಬಂಧ ಸಿಬಿಎಸ್‌ಇಯಿಂದ ಅಧಿಕೃತ ಪ್ರಕಟಣೆ ಇನ್ನಷ್ಟೇ ಹೊರಬೀಳಬೇಕಿದೆ.

'ನೀಟ್-2017' ಪರೀಕ್ಷೆ ಈ ವರ್ಷ ಮೇ 7ರಂದು 103 ಪಟ್ಟಣಗಳ 1921 ಪರೀಕ್ಷಾ ಕೇಂದ್ರಗಳಲ್ಲಿ 10 ಭಾಷೆಗಳಲ್ಲಿ ನಡೆದಿತ್ತು. 1522 ಅನಿವಾಸಿ ಭಾರತೀಯರು (ಎನ್‌ಆರ್‌ಐ), 480 ಸಾಗರೋತ್ತರ ನಾಗರಿಕತ್ವ ಹೊಂದಿರುವ ಭಾರತೀಯರು (ಒಸಿಐ), 70 ಭಾರತೀಯ ಮೂಲದ ವ್ಯಕ್ತಿಗಳು (ಪಿಐಒ), 613 ವಿದೇಶಿಯರು ಸೇರಿದಂತೆ 11,38,890 ವಿದ್ಯಾರ್ಥಿಗಳು 'ನೀಟ್-2017' ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು.

ನೀಟ್ 2018 ಪರೀಕ್ಷೆಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಪ್ರಕ್ರಿಯೆ 2018ರ ಜನವರಿಯಲ್ಲಿ ಆರಂಭಗೊಳ್ಳಲಿದೆ ಎಂದು ಟೈಮ್ಸ್ ಆಫ್ ಇಂಡಿಯಾ ವರದಿ ಮಾಡಿದೆ.

25 ವರ್ಷಕ್ಕಿಂತ ಮೇಲ್ಪಟ್ಟ ವಿದ್ಯಾರ್ಥಿಗಳು ನೀಟ್ ಪರೀಕ್ಷೆ ಬರೆಯಬಹುದಾಗಿದೆ. ಎಲ್ಲಕ್ಕಿಂತ ಮಿಗಿಲಾಗಿ, 25 ವರ್ಷಕ್ಕಿಂತ ಮೇಲ್ಪಟ್ಟ ಅಭ್ಯರ್ಥಿಗಳಿಗೆ ನೀಟ್ ಪರೀಕ್ಷೆ ಬರೆಯಲು ಸುಪ್ರೀಂಕೋರ್ಟ್ ನ್ಯಾಯಾಲಯವೇ ಅವಕಾಶ ಮಾಡಿಕೊಟ್ಟಿದೆ.

ನೀಟ್ 2017 ಪರೀಕ್ಷೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಸಂಬಂಧಪಟ್ಟಂತೆ ಸಾಕಷ್ಟು ವಿವಾದಗಳೆದ್ದವು. ಪ್ರತಿಭಟನೆಗಳೂ ನಡೆದಿದ್ದವು. "ಮೆಡಿಕಲ್ ಕಾಲೇಜುಗಳಲ್ಲಿ ಸೀಟು ಗಿಟ್ಟಿಸುವುದಕ್ಕಾಗಿ ನಡೆಯುವ ಅಖಿಲ ಭಾರತ ಪ್ರವೇಶ ಪರೀಕ್ಷೆ 'ನೀಟ್'ಗೆ ದೇಶೀ ಭಾಷೆಯ ಪ್ರಶ್ನೆ ಪತ್ರಿಕೆಗಳನ್ನು ವಿತರಿಸಲಾಗುವುದು. ಅದು ಇಂಗ್ಲಿಷ್ ಪ್ರಶ್ನೆ ಪತ್ರಿಕೆಯ ತರ್ಜುಮೆಯಾಗಿರುತ್ತದೆ," ಎಂದು ಕೇಂದ್ರ ಮಾನವ ಸಂಪನ್ಮೂಲ ಸಚಿವ ಪ್ರಕಾಶ್ ಜಾವಡೇಕರ್ ತಿಳಿಸಿದ್ದಾರೆ.

**ಕನಿಷ್ಠ ವಿದ್ಯಾರ್ಹತೆ:** ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯ ಅಥವಾ ರಾಜ್ಯ ಮಂಡಳಿಯಲ್ಲಿ 12ನೇ ತರಗತಿ (ಸೀನಿಯರ್ ಗ್ರೇಡ್) ತೇರ್ಗಡೆಗೊಂಡಿರತಕ್ಕದ್ದು. 12ನೇ ತರಗತಿಯಲ್ಲಿ ಇಂಗ್ಲಿಷ್ ಜತೆ ಫಿಸಿಕ್ಸ್ (ಭೌತಶಾಸ್ತ್ರ), ಕೆಮಿಸ್ಟ್ರಿ (ರಸಾಯನ ಶಾಸ್ತ್ರ), ಬಯಾಲಜಿ (ಜೀವಶಾಸ್ತ್ರ)/ ಬಯೋಟೆಕ್ನಾಲಜಿ (ಜೈವಿಕ ತಂತ್ರಜ್ಞಾನ) ಅಥವಾ ಇನ್ನಾವುದೇ ಐಚ್ಛಿಕ ವಿಷಯಗಳಿರಬೇಕು.

ಪಿಸಿಬಿಯಲ್ಲಿ ಸಾಮಾನ್ಯ ವರ್ಗದ ವಿದ್ಯಾರ್ಥಿಗಳು ಶೇ.50ರಷ್ಟು, ಸಾಮಾನ್ಯ-ಪಿಎಚ್ ವಿದ್ಯಾರ್ಥಿಗಳು ಶೇ.45ರಷ್ಟು ಹಾಗೂ ಎಸ್ಸಿ/ಎಸ್ಟಿ/ಇತರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಶೇ.40ರಷ್ಟು ಅಂಕ ಗಳಿಸಿರಬೇಕು.

**ಪ್ರಶ್ನೆಪತ್ರಿಕೆ ಮಾದರಿ:** ಪ್ರಶ್ನೆಪತ್ರಿಕೆಯ ಮಾದರಿಯಲ್ಲಿ ಈ ಬಾರಿ ಹೆಚ್ಚಿನ ಬದಲಾವಣೆ ಘೋಷಿಸಲಾಗಿಲ್ಲ. ಫಿಜಿಕ್ಸ್, ಕೆಮಿಸ್ಟ್ರಿ ಹಾಗೂ ಬಯಾಲಜಿ (ಜೀವಶಾಸ್ತ್ರ ಮತ್ತು ಪ್ರಾಣಿಶಾಸ್ತ್ರ)ದಲ್ಲಿ 180 ಒಬ್ಜೆಕ್ಟಿವ್ ಟೈಪ್ ಪ್ರಶ್ನೆಗಳನ್ನು ಕೇಳಲಾಗುವುದು. ಅವಧಿ: 3 ಗಂಟೆ

## ನೀಟ್‌ನಲ್ಲಿ ಇತ್ತೀಚಿನ ಬದಲಾವಣೆಗಳು

2017-18ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಆರು ಹೆಚ್ಚುವರಿ ಭಾಷೆಗಳಲ್ಲಿ (ಗುಜರಾತಿ, ಮರಾಠಿ, ಬೆಂಗಾಲಿ, ಅಸ್ಸಾಂ, ತೆಲುಗು ಮತ್ತು ತಮಿಳು-ಸಾಂಪ್ರದಾಯಿಕ ಇಂಗ್ಲಿಷ್ ಮತ್ತು ಹಿಂದಿ ಹೊರತುಪಡಿಸಿ) ನೀಟ್-ಯುಜಿ ನಡೆಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವಾಲಯ ಹೊರಡಿಸಿದ ಪ್ರಕಟಣೆ ತಿಳಿಸಿದೆ.

# DNA profiling pioneer Lalji Singh is dead

SPECIAL CORRESPONDENT
NEW DELHI

Eminent scientist and 'father of DNA fingerprinting in India' Lalji Singh died following a heart attack on Sunday. He was 70.

Dr. Singh was one of the leaders in making DNA fingerprinting mainstream in India, both for research and for forensic applications.

Based on his work he was tasked by the government – in the late 1990s – to establish the Centre for DNA Fingerprinting and Diagnostics (CDFD) with a mandate of making it a nodal centre for DNA fingerprinting and diagnostics for all species and several diseases.



Lalji Singh

Dr. Singh served as a director at the Centre for Cellular and Molecular Biology (CCMB) in Hyderabad from 1998 to 2009. He went on to become Vice Chancellor of the Banaras Hindu University, his alma mater.